# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 503 |
| ಸದಸ್ಯರ ಹೆಸರು | ಶ್ರೀ ಎಂ.ಎ.ಗೋಪಾಲಸ್ವಾಮಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 10.03.2020 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಸಚಿವರು |

| ಕ್ರ ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಮರಳು ಅಭಾವ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರವು ಸಾರ್ವಜನಿಕರಿಗೆ ಅಗತ್ಯವಿರುವ ಮರಳು ಪೂರೈಕೆಗೆ ರೂಪಿಸಿರುವ ನೀತಿ / ನಿಯಮಗಳೇನು; (ವಿವರ ನೀಡುವುದು) | ಸರ್ಕಾರವು ದಿನಾಂಕ 12.08.2016 ರಂದು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು, 1994ಕ್ಕೆ ತಿದ್ದುಪಡಿ ತಂದು ತಿದ್ದುಪಡಿ ನಿಯಮಗಳು, 2016ನ್ನು ಜಾರಿಗೊಳಿಸಿರುತ್ತದೆ. ಸದರಿ ತಿದ್ದುಪಡಿ ನಿಯಮಾವಳಿಗಳಲ್ಲಿ ನದಿ ಪಾತ್ರದ ಮರಳು ಬ್ಲಾಕ್‌ಗಳನ್ನು ಸಾರ್ವಜನಿಕ ಟೆಂಡರ್ ಕಂ–ಹರಾಜು ಮೂಲಕ ವಿಲೇಪಡಿಸಲು, ಸರ್ಕಾರಿ ಕಾಮಗಾರಿಗಳಿಗೆ ಮೀಸಲಿರಿಸಲು, ಪಟ್ಟಾ ಜಮೀನು ಮರಳು ಗಣಿಗಾರಿಕೆಗೆ ಲೈಸೆನ್ಸ್ ನೀಡಲು, ಎಂ–ಸ್ಯಾಂಡ್ ಉತ್ಪಾದನೆಯನ್ನು ಪ್ರೋತ್ಸಾಹಿಸಲು ಅವಕಾಶ ಕಲ್ಪಿಸಲಾಗ್ಗಿರುತ್ತದೆ.<br>ಅದರಂತೆ ರಾಜ್ಯದ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳನ್ನು ಪೂರೈಕೆ ಮಾಡಲಾಗುತ್ತಿದೆ. ಅದ್ಯಾಗೂ ಸಹ ಕೆಲವು ಜಿಲ್ಲೆಗಳಲ್ಲಿ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಅಲ್ಪ ಪ್ರಮಾಣದ ಮರಳಿನ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ರಾಜ್ಯದಲ್ಲಿ ಮರಳಿನ ಅಭಾವವನ್ನು ನೀಗಿಸಲು ಹಾಗೂ ಯೋಗ್ಯ ದರದಲ್ಲಿ ಮರಳು ದೊರಕುವಂತೆ ಮಾಡಲು ಪ್ರಸ್ತುತ ಇರುವ ನಿಯಮಗಳಂತೆಯೇ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳು ಪೂರೈಕೆ ಮಾಡಲು ಕ್ರಮ ವಹಿಸಲಾಗುತ್ತಿದ್ದು, ವಿವರಗಳು ಈ ಕೆಳಕಂಡಂತಿರುತ್ತವೆ.<br>• ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ರ ನಿಯಮ 31-T ರಂತೆ, ರಾಜ್ಯದ ನದಿ ಪಾತ್ರಗಳಲ್ಲಿ 237 ಮರಳು ಬ್ಲಾಕ್‌ಗಳನ್ನು ಸಾರ್ವಜನಿಕ ಟೆಂಡರ್ ಕಂ ಹರಾಜು ಮೂಲಕ ಮರಳು ಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ. 2019–20ನೇ ಸಾಲಿನ ಜನವರಿ ಅಂತ್ಯದ ವರೆಗೆ ಸದರಿ ಮರಳು ಬ್ಲಾಕ್‌ಗಳಿಂದ 16.82 ಲಕ್ಷ ಮೆಟ್ರಿಕ್ ಟನ್ ಮರಳನ್ನು ಸಾರ್ವಜನಿಕ ಕಾಮಗಾರಿಗಳಿಗೆ ಪೂರೈಸಲಾಗುತ್ತಿದೆ. |

--2

| | | |
|---|---|---|
| | | • ನಿಯಮ **31-S** ರಂತೆ, ಸರ್ಕಾರಿ ಕಾಮಗಾರಿಗಳಿಗೆ ರಾಜ್ಯದ ನದಿ ಪಾತ್ರಗಳಲ್ಲಿ **18** ಮರಳು ಬ್ಲಾಕ್‌ಗಳನ್ನು ಸರ್ಕಾರಿ ಇಲಾಖೆ / ಸಂಸ್ಥೆಗಳಿಗೆ ಮಂಜೂರು ಮಾಡಲಾಗಿರುತ್ತದೆ. ಈ ಮರಳು ಬ್ಲಾಕ್‌ಗಳಲ್ಲಿ 2019-20ನೇ ಸಾಲಿನ ಜನವರಿ ಅಂತ್ಯದವರೆಗೆ 1.34 ಲಕ್ಷ ಮೆಟ್ರಿಕ್ ಟನ್ ಮರಳು ಗಣಿಗಾರಿಕೆ ನಡೆಸಿ, ಸರ್ಕಾರಿ ಕಾಮಗಾರಿಗಳಿಗೆ ಪೂರೈಸಲಾಗಿರುತ್ತದೆ.<br>• ನಿಯಮ **31-ZA** ರಂತೆ, ಪಟ್ಟಾ ಜಮೀನುಗಳಲ್ಲಿ ಮರಳು ಗಣಿಗಾರಿಕೆಗಾಗಿ 44 ಲೈಸನ್ಸ್ ಮಂಜೂರು ಮಾಡಲಾಗಿರುತ್ತದೆ. 2017-18ನೇ ಸಾಲಿನ ಜನವರಿ ಅಂತ್ಯದವರೆಗೆ 2.95 ಲಕ್ಷ ಮೆಟ್ರಿಕ್ ಟನ್ ಮರಳು ಗಣಿಗಾರಿಕೆ ನಡೆಸಿ, ಸಾರ್ವಜನಿಕರಿಗೆ ವಿತರಿಸಲಾಗಿರುತ್ತದೆ.<br>• ನಿಯಮ **31-ZB** ರಂತೆ, ಕರಾವಳಿ ನಿಯಂತ್ರಣ ವಲಯಗಳಲ್ಲಿ 30 ಮರಳು ದಿಬ್ಬಗಳಲ್ಲಿ ಮರಳು ತೆರವುಗೊಳಿಸಲು ಕರ್ನಾಟಕ ಕರಾವಳಿ ವಲಯ ನಿಯಂತ್ರಣ ಪ್ರಾಧಿಕಾರದಿಂದ ಅನುಮತಿ ಪಡೆಯಲಾಗಿರುತ್ತದೆ. ಅದರಂತೆ, ಸದರಿ ಮರಳು ದಿಬ್ಬಗಳಿಂದ 2019-20ನೇ ಸಾಲಿನ ಜನವರಿ ಅಂತ್ಯದವರೆಗೆ 7.08 ಲಕ್ಷ ಮೆಟ್ರಿಕ್ ಟನ್ ಮರಳನ್ನು ತೆರವುಗೊಳಿಸಿ, ಸಾರ್ವಜನಿಕರಿಗೆ ವಿತರಿಸಲಾಗಿರುತ್ತದೆ.<br>• ನಿಯಮ **31-ZC** ರಂತೆ, ಪ್ರಸ್ತುತ ರಾಜ್ಯದಲ್ಲಿ ಒಟ್ಟು 289 ಎಂ-ಸ್ಯಾಂಡ್ ಘಟಕಗಳು ಕಾರ್ಯ ನಿರ್ವಹಿಸುತ್ತಿರುತ್ತವೆ. ಸದರಿ ಎಂ-ಸ್ಯಾಂಡ್ ಘಟಕಗಳಿಂದ ವಾರ್ಷಿಕ ಅಂದಾಜು 30 ದಶ ಲಕ್ಷ ಮೆಟ್ರಿಕ್ ಟನ್ ಎಂ-ಸ್ಯಾಂಡನ್ನು ಉತ್ಪಾದಿಸಲಾಗುತ್ತಿದ್ದು, ಸರ್ಕಾರಿ ಮತ್ತು ಸಾರ್ವಜನಿಕ ಕಾಮಗಾರಿಗಳಿಗೆ ಪೂರೈಕೆಯಾಗುತ್ತಿದೆ.<br>• ಮುಂದುವರೆದು, ದಿನಾಂಕ 16.11.2017 ರಂದು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ಕ್ಕೆ ತಿದ್ದುಪಡಿ ಮಾಡಿ, ನಿಯಮ **31-ZF & 31-ZG** ರಲ್ಲಿ ವಿದೇಶಗಳಿಂದ ರಾಜ್ಯಕ್ಕೆ ಮರಳು ಪೂರೈಕೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಆದುದರಿಂದ, 49,213 ಮೆಟ್ರಿಕ್ ಟನ್ ವಿದೇಶದಿಂದ ಆಮದಾದ ಮರಳನ್ನು ಸಾರ್ವಜನಿಕ ಕಾಮಗಾರಿಗಳಿಗೆ ಪೂರೈಸಲಾಗುತ್ತಿದೆ.<br>• ದಿನಾಂಕ: **01.10**.2019 ರ ಸರ್ಕಾರದ ಆದೇಶ ಸಂಖ್ಯೆ: ಸಿಐ 213 ಎಂಎಂಎನ್ **2019** ರಂತೆ ಪ್ರವಾಹದಿಂದ ನದಿಗಳ ಪಕ್ಕದ ಕೃಷಿ ಜಮೀನುಗಳಲ್ಲಿ ಸಂಗ್ರಹವಾಗಿರುವ 1,54,616 ಮೆಟ್ರಿಕ್ ಟನ್ ಮರಳನ್ನು ಸ್ಥಳೀಯ ಕಾಮಗಾರಿಗಳಿಗೆ ನೀಡಲಾಗಿರುತ್ತದೆ. |

| | | |
|---|---|---|
| ಆ. | ಹಾಸನ ಜಿಲ್ಲೆಯಲ್ಲಿ ಸಾರ್ವಜನಿಕರಿಗೆ ಮರಳು ಪೂರೈಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; ಹಾಗೂ ಸರ್ಕಾರದಿಂದ ಮರಳು ಪೂರೈಸಲು ಗುರುತಿಸಿರುವ ಸ್ಥಳಗಳು ಯಾವುವು; ಹಾಗೂ ಸರ್ಕಾರ ಪ್ರತಿ ಟನ್ ಮರಳಿಗೆ ನಿಗದಿಪಡಿಸಿರುವ ದರವೆಷ್ಟು; | ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ರಂತೆ 2016-17ನೇ ಸಾಲಿನಲ್ಲಿ ಹಾಸನ ಜಿಲ್ಲೆಯ ಸಕಲೇಶಪುರ, ಆಲೂರು, ಬೇಲೂರು ತಾಲ್ಲೂಕು ವ್ಯಾಪ್ತಿಯಲ್ಲಿನ ಹೇಮಾವತಿ ಹಾಗೂ ಇತರೆ ಹಳ್ಳಗಳ ಪಾತ್ರಗಳಲ್ಲಿ 40 ಮರಳು ಬ್ಲಾಕ್‌ಗಳನ್ನು ಗುರುತಿಸಲಾಗಿರುತ್ತದೆ. ಈ ಪೈಕಿ 04 ಮರಳು ನಿಕ್ಷೇಪಗಳನ್ನು ಸರ್ಕಾರಿ ಕಾಮಗಾರಿಗೆ ಮೀಸಲಿರಿಸಲಾಗಿರುತ್ತದೆ.<br><br>36 ಮರಳು ಬ್ಲಾಕ್‌ಗಳನ್ನು ಟೆಂಡರ್ ಕಂ ಇ-ಹರಾಜು ಪ್ರಕ್ರಿಯೆಗೆ ಒಳಪಡಿಸಲಾಗಿದ್ದು, ಈ ಪೈಕಿ 05 ಮರಳು ಬ್ಲಾಕ್‌ಗಳಿಗೆ ಕನಿಷ್ಠ ಬಿಡ್ಡುದಾರರಿಲ್ಲದ ಕಾರಣ ಟೆಂಡರ್ ಕಂ ಹರಾಜು ಪ್ರಕ್ರಿಯೆಯನ್ನು ಕೈಗೊಂಡಿರುವುದಿಲ್ಲ. ಉಳಿದ 31 ಮರಳು ಬ್ಲಾಕ್‌ಗಳನ್ನು ಟೆಂಡರ್ ಕಂ ಇ-ಹರಾಜು ಮೂಲಕ ವಿಲೇವಾರಿ ಮಾಡಲಾಗಿರುತ್ತದೆ. 31 ಮರಳು ಬ್ಲಾಕ್‌ಗಳಲ್ಲಿ 08 ಮರಳು ಬ್ಲಾಕ್‌ಗಳ ಬಿಡ್ಡು ಮೊತ್ತವು ರೂ.2,000/-ಗಳಿಗಿಂತ ಅಧಿಕವಾಗಿರುವುದರಿಂದ ಜಿಲ್ಲಾ ಮರಳು ಸಮಿತಿಯಿಂದ ಸದರಿ 8 ಬಿಡ್ಡುಗಳನ್ನು ರದ್ದುಪಡಿಸಿ, ಉಳಿದ 23 ಮರಳು ಬ್ಲಾಕ್‌ಗಳ ಯಶಸ್ವಿ ಬಿಡ್ಡುದಾರರಿಗೆ ನಿಯಮಾನುಸಾರ ಮರಳು ಗುತ್ತಿಗೆಗಳನ್ನು ಮಂಜೂರು ಮಾಡಲಾಗಿದೆ. ಪ್ರಸ್ತುತ ಸದರಿ ಮರಳು ಬ್ಲಾಕ್‌ಗಳಿಂದ 2019-20ನೇ ಸಾಲಿನ ಜನವರಿ ಅಂತ್ಯದವರೆಗೆ ಒಟ್ಟು 1,27,621 ಮೆಟ್ರಿಕ್ ಟನ್ ಮರಳನ್ನು ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಪೂರೈಸಲಾಗುತ್ತಿರುತ್ತದೆ.<br><br>ಪ್ರಸ್ತುತ ಹಾಸನ ಜಿಲ್ಲೆಯಲ್ಲಿ 7 ಎಂ-ಸ್ಯಾಂಡ್ ಘಟಕಗಳು ಕಾರ್ಯ ನಿರ್ವಹಿಸುತ್ತಿದ್ದು, ಸದರಿ ಘಟಕಗಳಿಂದ 2019-20ನೇ ಸಾಲಿನ ಜನವರಿ ಅಂತ್ಯದವರೆಗೆ ಜಿಲ್ಲೆಯ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ 2,83,478 ಮೆಟ್ರಿಕ್‌ಟನ್ ಎಂ-ಸ್ಯಾಂಡ್ ಪೂರೈಕೆಯಾಗಿರುತ್ತದೆ.<br><br>ಅಲ್ಲದೇ ಚಿಕ್ಕಮಗಳೂರು ಜಿಲ್ಲೆ, ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕು ಹಾಗೂ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕು ವ್ಯಾಪ್ತಿಯ ಎಂ-ಸ್ಯಾಂಡ್ ಘಟಕಗಳಿಂದ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಎಂ-ಸ್ಯಾಂಡ್ ಪೂರೈಕೆಯಾಗಿರುತ್ತದೆ. |

| | | |
|---|---|---|
| | | ಜಿಲ್ಲಾ ಮರಳು ಸಮಿತಿಯಿಂದ ಅಧಿಕ ಬಿಡ್ ಮೊತ್ತದಡಿ ತಿರಸ್ಕೃತಗೊಂಡ 8 ಮರಳು ಬ್ಲಾಕ್‌ಗಳ ಬಿಡ್ಡುದಾರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ದಾಖಲಿಸಿದ್ದು, ಈ ಬಗ್ಗೆ ಮಾನ್ಯ ನ್ಯಾಯಾಲಯವು ಸದರಿ ಬಿಡ್ಡುಗಳನ್ನು ಪರಿಗಣಿಸುವಂತೆ ಆದೇಶಿಸಿರುತ್ತದೆ. ಅದರಂತೆ ಮರಳು ಗುತ್ತಿಗೆಗಳನ್ನು ಮಂಜೂರು ಮಾಡಲು ಕ್ರಮ ವಹಿಸಲಾಗುತ್ತಿದ್ದು, ಗುತ್ತಿಗೆ ಮಂಜೂರಾದ ನಂತರ ಸದರಿ ಮರಳು ಬ್ಲಾಕ್‌ಗಳಿಂದ ಜಿಲ್ಲೆಯ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳು ಪೂರೈಸಲು ಕ್ರಮ ವಹಿಸಲಾಗುವುದು.<br>ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಮಂಜೂರಾದ ಮರಳು ಗುತ್ತಿಗೆ ವಿವರಗಳನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ.<br>ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಟೆಂಡರ್ ಕಂ ಇ-ಹರಾಜು ಮೂಲಕ ಮಂಜೂರಾದ ಮರಳು ಗುತ್ತಿಗೆ ಪ್ರದೇಶಗಳಲ್ಲಿ ಮರಳು ಗಣಿಗಾರಿಕೆ ಮತ್ತು ಸ್ಟಾಕ್‌ಯಾರ್ಡ್‌ಗೆ ಮರಳು ಸಾಗಾಣಿಕೆ ವೆಚ್ಚ ರೂ.150/-, ಆಡಳಿತ ವೆಚ್ಚ ರೂ.25/- ಮತ್ತು ಗುತ್ತಿಗೆದಾರರ ಲಾಭಾಂಶ ಮೊತ್ತ ರೂ.200/- ಸೇರಿ ಪ್ರತಿ ಮೆಟ್ರಿಕ್ ಟನ್ ಮರಳಿಗೆ ರಾಜಧನ, ಬಿಡ್ಡ್ ಪ್ರೀಮಿಯಂ, ಡಿಎಂಎಫ್ ಮೊತ್ತ ಹೊರತುಪಡಿಸಿ ರೂ. 375/- ಗಳ ಮರಳು ಮಾರಾಟ ದರವನ್ನು ಹಾಸನ ಜಿಲ್ಲಾ ಮರಳು ಸಮಿತಿಯಿಂದ ನಿಗದಿಪಡಿಸಲಾಗಿರುತ್ತದೆ. ಪ್ರತಿ ಬ್ಲಾಕ್‌ಗಳ ಪ್ರತಿ ಮೆಟ್ರಿಕ್ ಟನ್ ಮರಳು ಮಾರಾಟ ದರವನ್ನು **ಅನುಬಂಧ-02** ರಲ್ಲಿ ಲಗತ್ತಿಸಿದೆ. |
| ಇ | ಕಳೆದ 2 ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ಎಷ್ಟು ಟನ್ ಮರಳು ಪೂರೈಕೆಗೆ ಬೇಡಿಕೆ ಇತ್ತು; ಎಷ್ಟು ಟನ್ ಮಾರಾಟ ಮಾಡಲಾಗಿದೆ; ಬೇಡಿಕೆಯಂತೆ ಪೂರ್ಣವಾಗಿ ಮರಳು ಪೂರೈಸಲಾಗಿದೆಯೇ?<br>(ವಿವರ ನೀಡುವುದು) | ಹಾಸನ ಜಿಲ್ಲಾ ವ್ಯಾಪ್ತಿಯ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆ ಹಾಗೂ ಇತರೆ ಕಾಮಾಗಾರಿ ಇಲಾಖೆಗಳ ಮಾಹಿತಿಯಂತೆ ವಾರ್ಷಿಕ ಅಂದಾಜು 8 ರಿಂದ 9 ಲಕ್ಷ ಮೆಟ್ರಿಕ್ ಟನ್ ಪ್ರಮಾಣದ ಮರಳಿನ ಬೇಡಿಕೆ ಇರುತ್ತದೆ.<br>2018-19 ಹಾಗೂ 2019-20ನೇ ಸಾಲಿನಲ್ಲಿ ಜಿಲ್ಲೆಯ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ನದಿ ಪಾತ್ರದ |

ಮರಳು ಗುತ್ತಿಗೆ ಪ್ರದೇಶಗಳಿಂದ ಹಾಗೂ ಎಂ-ಸ್ಯಾಂಡ್ ಘಟಕಗಳಿಂದ ಪೂರೈಕೆಯಾಗಿರುವ ಮರಳಿನ ಪ್ರಮಾಣದ ವಿವರಗಳು ಈ ಕೆಳಕಂಡಂತಿರುತ್ತವೆ.

| ಕ್ರ ಸಂ. | ವರ್ಷ | ಪೂರೈಕೆಯಾಗಿರುವ ನದಿ ಮರಳಿನ ಪ್ರಮಾಣ (ಮೆ.ಟನ್ ಗಳಲ್ಲಿ) | ಎಂ-ಸ್ಯಾಂಡ್ ಪ್ರಮಾಣ (ಮೆ.ಟನ್ ಗಳಲ್ಲಿ) | ಒಟ್ಟು ಪ್ರಮಾಣ (ಮೆ.ಟನ್ ಗಳಲ್ಲಿ) |
|---|---|---|---|---|
| 1 | 2018-19 | 1,75,009 | 1,03,550 | 2,78,559 |
| 2 | 2019-20 (ಜನವರಿ-2020 ರ ಅಂತ್ಯದವರೆಗೆ) | 1,27,621 | 2,83,478 | 4,11,099 |

ಅಲ್ಲದೇ ನೆರೆ ಜಿಲ್ಲೆಗಳಾದ ತುಮಕೂರು, ರಾಮನಗರ, ಚಿಕ್ಕಮಗಳೂರು ಹಾಗೂ ಮಂಡ್ಯ ಜಿಲ್ಲೆಗಳ ಎಂ.ಸ್ಯಾಂಡ್ ಘಟಕಗಳಿಂದ ನದಿ ಮರಳು ಸೇರಿದಂತೆ ಹಾಸನ ಜಿಲ್ಲೆಗೆ 2019-20ನೇ ಸಾಲಿನ ಜನವರಿ ಅಂತ್ಯದವರೆಗೆ ಒಟ್ಟು ಅಂದಾಜು 2,59,452 ಮೆಟ್ರಿಕ್ ಟನ್ ಎಂ-ಸ್ಯಾಂಡ್ ಹಾಗೂ ನದಿ ಮರಳು ಪೂರೈಕೆಯಾಗಿದ್ದು, ಜಿಲ್ಲೆಗೆ ಬೇಡಿಕೆ ತಕ್ಕಂತೆ ಮರಳು ಪೂರೈಕೆಯಾಗಿರುತ್ತದೆ.

ಸಂಖ್ಯೆ: ಸಿಐ 111 ಎಂಎಂಎನ್ 2020

(ಸಿ.ಸಿ. ಪಾಟೀಲ)

ಗಣಿ ಮತ್ತು ಭೂವಿಜ್ಞಾನ ಸಚಿವರು

**Annexure-1**

# Sand Exection details of Hassan District

| Sl. No. | Name of the Taluk | Name of the Block | Extent (Acers) | Date of Execution | Name of Sucessful Bidder | % of Bid | Bid amount Per M.T | Reservation |
|---|---|---|---|---|---|---|---|---|
| 1 | Sakaleshapura | Byagadihalli | 6.00 | 08-02-2018 | H.R. Paramesh | 502.50 | 301.50 | PH |
| 2 | | Lakkunda | 9.00 | 08-02-2018 | H.T. Venkatesh | 1017.50 | 610.50 | GN |
| 3 | | Igoor-2 | 7.50 | 08.02.2018 | Aruna Rao S.R. | 402.50 | 241.50 | ST |
| 4 | | Hennali-2 | 10.00 | 09-02-2018 | H.K. Mahendra | 1193.00 | 716.00 | GN |
| 5 | | Thonthalapura-2 | 5.00 | 14-02-2018 | Sathigala R. Mahesh | 1010.00 | 606.00 | GN |
| 6 | | Nidigere | 6.25 | 19-02-2018 | Paramesh H.R | 1019.99 | 611.99 | GN |
| 7 | Alur | Kaganuru | 5.00 | 01-03-2018 | Parvathaiah | 1015.00 | 609.00 | SC |
| 8 | Sakaleshapura | Hennali-1 | 8.00 | 01.03.2018 | Nagaraju M | 1117.50 | 670.50 | SC |
| 9 | Alur | Harihalli-1 | 13.00 | 03.02.2018 | Mohammed Iqbal | 1215.00 | 729.00 | GN |
| 10 | Sakaleshapura | Halebelur | 20.00 | 05.03.2018 | Raghavendra M.A | 1697.50 | 1018.50 | GN |
| 11 | | Mavinahalli | 13.00 | 05.03.2018 | Prakash D T | 1127.50 | 676.50 | GN |
| 12 | | Malali | 15.00 | 07.03.2018 | Aravinda K S | 2110.00 | 1266.00 | GN |
| 13 | | Igoor-1 | 7.00 | 26.03.2018 | H.T. Venkatesh | 1130.00 | 678.00 | GN |
| 14 | | Kodally | 20.00 | 28.03.2018 | R. Nagarajappa | 325.00 | 195.00 | ST |
| 15 | | Magalu | 14.00 | 05.04.2018 | Parvathaiah | 1183.50 | 710.10 | SC |
| 16 | Alur | Kodagalavadi | 9.00 | 24.04.2018 | D.R. Mahesh | 3175.00 | 1905.00 | GN |
| 17 | | Hemmige | 13.00 | 27.04.2018 | K.V. Shanmukha | 335.00 | 201.00 | PH |
| 18 | | Hyaragalale | 13.00 | 23.05.2018 | C.N. Dani | 1225.00 | 735.00 | SC |
| 19 | Belur | Tumbadevarahally | 18.00 | 02.06.2018 | H.R. Chandregowda | 3229.50 | 1937.70 | GN |
| 20 | | Hosahalli | 16.00 | 27.06.2018 | Zakeer Hussain | 1014.99 | 608.99 | GN |
| 21 | | Goravanahalli | 20.00 | 27.06.2018 | Kumar H.N | 495.50 | 298.30 | ST |
| 22 | | Narve | 16.00 | 30.06.2018 | Dharmaprakash C.R | 1031.49 | 618.89 | SC |
| 23 | Sakaleshapura | Kanagalamane | 22.00 | 05.11.2018 | Syed Hafeez | 3080.00 | 1848.00 | GN |

ಅನುಬಂಧ-2

ಹಾಸನ ಜಿಲ್ಲಾ ಮರಳು ಸಮಿತಿಯಿಂದ ನಿಗಧಿಪಡಿಸಲಾದ ಮರಳು ಮಾರಾಟ ದರದ ವಿವರಗಳು.

| ಕ್ರ ಸಂ | ತಾಲ್ಲೂಕು | ಗ್ರಾಮ | ಸರ್ವೆ.ನಂ /ನದಿ | ಮರಳು ಬ್ಲಾಕ್‌ಗಳು | ವಿಸ್ತೀರ್ಣ (ಎಕರೆಗಳಲ್ಲಿ) | ಮಾರಾಟ ದರ (ರೂ.ಗಳಲ್ಲಿ) |
|---|---|---|---|---|---|---|
| 1 | ಸಕಲೇಶಪುರ | ಕೌಡಳ್ಳಿ & ಸಕಲೇಶಪುರ | ಕೌಡಳ್ಳಿ 42, 41, 40, 52, 10, 6, & ಸಕಲೇಶಪುರ 112, 111, ಹೇಮಾವತಿ ನದಿ | ಕೌಡಳ್ಳಿ | 20.00 | 670 |
| | | ಐಗೂರು | 84, 86, 87, 88 ಐಗೂರು ಹಳ್ಳ | ಐಗೂರು-2 | 7.20 | 719 |
| | | ಬ್ಯಾಗಡಿಹಳ್ಳಿ | 46, 68, 65, 34, 35, 36, 37 ಬ್ಯಾಗಡಿಹಳ್ಳಿ ಹಳ್ಳ | ಬ್ಯಾಗಡಿಹಳ್ಳಿ | 6.00 | 782 |
| | | ತೊಂತಲಾಪುರ | 68, 69, 70, 73, 74, 75, 78 ತೊಂತಲಾಪುರ ಹಳ್ಳ | ತೊಂತಲಾಪುರ-2 | 5.00 | 1102 |
| | | ಲಕ್ಕುಂದ | 41, 42, 43 ಕುಪ್ಪಳ್ಳಿಹಳ್ಳ | ಲಕ್ಕುಂದ | | 1106 |
| | | ನಿಡಿಗೆರೆ | 110, 116 ಐಗೂರುಹಳ್ಳ | ನಿಡಿಗೆರೆ | 6.10 | 1108 |
| | | ಹೆನ್ನಲಿ-1 | 20 ಐಗೂರುಹಳ್ಳ | ಹೆನ್ನಲಿ-1 | 8.00 | 1169 |
| | | ಮಾವಿನ ಹಳ್ಳಿ | 10, 11, 61 ಹೇಮಾವತಿ ನದಿ | ಮಾವಿನಹಳ್ಳಿ | 13.00 | 1176 |
| | | ಐಗೂರು-1 | 84, ಐಗೂರು ಹಳ್ಳ | ಐಗೂರು-1 | 7.00 | 1177 |
| | | ಮಾಗಲು | 45, 60 ಹೇಮಾವತಿ ನದಿ | ಮಾಗಲು | 14.00 | 1211 |
| | | ಹೆನ್ನಲಿ-2 | 65, 67, 68, 69, 76, 79, 82 ಐಗೂರುಹಳ್ಳ | ಹೆನ್ನಲಿ-2 | 10.00 | 1217 |
| | | ಹಾಲೇಬೇಲೂರು | 99, 98, 97, 95 ಹೇಮಾವತಿ ನದಿ | ಹಾಲೇಬೇಲೂರು | 20.00 | 1535 |
| | | ಮಳಲಿ | 54, 57, 80, 81, 82 ಹೇಮಾವತಿ ನದಿ | ಮಳಲಿ | 15.00 | 1795 |
| | | ಕಣಗಲಮನೆ | 35, 33, 25, 24, 23, 22 ಹೇಮಾವತಿನದಿ | ಕಣಗಲಮನೆ | 22.00 | 2406 |
| 2 | ಆಲೂರು | ಹೆಮ್ಮಿಗೆ-1 | 24, 25, 19 ಹೇಮಾವತಿ ನದಿ | ಹೆಮ್ಮಿಗೆ-1 | 13.00 | 676 |

| | | | | | | |
|---|---|---|---|---|---|---|
| | | ಕಾಗನೂರು | 109, 110, 112, ಹೇಮಾವತಿ ನದಿ | ಕಾಗನೂರು | 5.00 | 1105 |
| | | ಹರೀಹಳ್ಳಿ-1 | 65, 66, ಹೇಮಾವತಿ ನದಿ | ಹರೀಹಳ್ಳಿ-1 | 13.00 | 1231 |
| | | ಹ್ಯಾರಗಳಲೆ | 39, 48, 41, ಹೇಮಾವತಿ ನದಿ | ಹ್ಯಾರಗಳಲೆ | 13.00 | 1237 |
| | | ಕೊಡಗಲವಾಡಿ | 26, 27, 28, 29, 30, ಹೇಮಾವತಿ ನದಿ | ಕೊಡಗಲವಾಡಿ | 9.00 | 2466 |
| 3 | ಬೇಲೂರು | ಗೊರವನಹಳ್ಳಿ & ಹೊಸಹಳ್ಳಿ | ಗೊರವನಹಳ್ಳಿ 1, 2, 5, ಹೊಸಹಳ್ಳಿ 15, 25, ಹೇಮಾವತಿ ನದಿ | ಗೊರವನಹಳ್ಳಿ | 20.00 | 778 |
| | | ಹೊಸಹಳ್ಳಿ | 60, 59, 57, 56, 55, 24, 25, ಹೇಮಾವತಿ ನದಿ | ಹೊಸಹಳ್ಳಿ | 16.00 | 1105 |
| | | ನಾರ್ವೆ & ಗೊರವನಹಳ್ಳಿ | ನಾರ್ವೆ 68, 78, 79, 81 ಗೊರವನಹಳ್ಳಿ 56, ಹೇಮಾವತಿ ನದಿ | ನಾರ್ವೆ | 16.00 | 1115 |
| | | ತುಂಬುದೇವರ ಹಳ್ಳಿ | 272, 274, 289, 307, 308, ಹೇಮಾವತಿ ನದಿ | ತುಂಬುದೇವರಹಳ್ಳಿ | 18.00 | 2500 |

Deputy Director (Min. Admn)
Dept. of Mines & Geology
Bangalore-560001

CI 111 MMN 2020